# ಎನ್ಐಟಿಕೆ: ಸುಸಜ್ಜಿತ ಈಜುಕೊಳ

ಮಂಗಳೂರು: ಸುರತ್ಕಲ್‌ನ ಎನ್ಐಟಿಕೆ ಆವರಣದಲ್ಲಿ ನಿರ್ಮಿಸಿರುವ ಸುಸಜ್ಜಿತ ಈಜುಕೊಳವನ್ನು ಬುಧವಾರ ಉದ್ಘಾಟಿಸಲಾಯಿತು. ಭಾರತ ಅಥ್ಲೆಟಿಕ್ ತಂಡದ ಮುಖ್ಯ ಕೋಚ್ ರಾಧಾಕೃಷ್ಣನ್ ನಾಯರ್ ಉದ್ಘಾಟಿಸಿದರು. ಸಂಸ್ಥೆಯ ನಿರ್ದೇಶಕ ಪ್ರೊ.ಬಿ.ರವಿ ಇದ್ದರು.

ಈಜುಕೊಳ 50 ಮೀಟರ್ಸ್ ಉದ್ದ ಮತ್ತು 25 ಮೀ ಅಗಲವಿದ್ದು 10 ಲೇನ್‌ಗಳು ಇವೆ. ಓಝೋನ್ ಆಧಾರಿತ ಫಿಲ್ಟರ್ ಸೌಲಭ್ಯವನ್ನು ಒಳಗೊಂಡಿದ್ದು ರಾಸಾಯನಿಕ ರಹಿತ ನೀರು ಸಂಸ್ಕರಣಾ ವ್ಯವಸ್ಥೆ ಮಾಡಲಾಗಿದೆ. 2023ರ ಜುಲೈಯಲ್ಲಿ ಆರಂಭಗೊಂಡ ಯೋಜನೆಗೆ ₹ 7.39 ಕೋಟಿ ವೆಚ್ಚವಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಮುಂದಿನ ವರ್ಷ ಜನವರಿ 10ರಿಂದ 12ರ ವರೆಗೆ ಎನ್ಐಟಿಕೆಯಲ್ಲಿ ಅಖಿಲ ಭಾರತ ಅಂತರ ಎನ್ಐಟಿ ಕ್ರೀಡಾಕೂಟ ನಡೆಯಲಿದ್ದು ಈಜು, ಅಥ್ಲೆಟಿಕ್ಸ್ ಮತ್ತು ಪವರ್ ಸ್ಪೋರ್ಟ್ಸ್‌ಗೆ ಆದ್ಯತೆ ಸಿಗಲಿದೆ.

Prajavani, Date:21/11/24, p, n- - 03